ವಿಜಯ ಕರ್ನಾಟಕ, ಬೆಂಗಳೂರು
ಮಂಗಳವಾರ 23 ಮೇ 2006

# ಅರಣ್ಯ ಇಲಾಖೆಗಳು ಎತ್ತ ಸಾಗಿವೆ?

ಎರಡು ದಶಕಗಳಿಗೂ ಹಿಂದೆ ನಾನು ವನ್ಯಜೀವಿ ಹಾಗೂ ಅರಣ್ಯಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಏನಾದರೂ ಪ್ರಯತ್ನಮಾಡಬೇಕೆಂದು ಹೊರಟಾಗ, ಮೊದಲ ಬಾರಿಗೆ ಅರಣ್ಯ ಇಲಾಖೆಯ ಸಂಪರ್ಕವೊದಗಿತು. ಭಾರತದಲ್ಲಿ ಅರಣ್ಯ ಪ್ರದೇಶವೆಂದು ಗುರುತಿಸಲಾದ ಶೇ. 20ರಷ್ಟು ಭೂಭಾಗವನ್ನು ಸಂರಕ್ಷಿಸುವ ಹೊಣೆ ಹೊತ್ತ ಈ ಇಲಾಖೆಯ ಜವಾಬ್ದಾರಿ ಗುರುತರವಾದುದು. ಆದರೆ 1990ರ ದಶಕದಲ್ಲಿನ ಅರಣ್ಯ ಇಲಾಖೆಯ ಅಧಿಕಾರಿಗಳಲ್ಲಿ ಕಂಡು ಬರುತ್ತಿದ್ದ ಶ್ರದ್ಧೆ, ಕಾರ್ಯಾಸಕ್ತಿ, ಸಂರಕ್ಷಣಾತತ್ಪರತೆಗಳು ಈಗಿನ ಬಹುತೇಕ ಅಧಿಕಾರಿವಲಯದಲ್ಲಿ ಅಪರೂಪವಾಗುತ್ತಿದ್ದು, ಈ ಬೆಳವಣಿಗೆ ಪ್ರಸ್ತುತ ಅರಣ್ಯಗಳಿಗೂ ವನ್ಯಜೀವಿಗಳಿಗೂ ಒದಗಿರುವ ಆಪತ್ತಿನ ದೃಷ್ಟಿಯಿಂದ ಎಲ್ಲರಿಗೂ ಚಿಂತೆಯುಂಟುಮಾಡುವಂಥದು.

ಸಮಗ್ರಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆ ಅಥವಾ 'ಇಕೋ ಡೆವಲಪ್‌ಮೆಂಟ್' ಹೆಸರಿನಲ್ಲಿ, ಅರಣ್ಯಗಳನ್ನು ನಿರ್ವಹಿಸಲು ವಿವಿಧೋದ್ದೇಶ ನೆರವುನಿಧಿ ಏಜನ್ಸಿಗಳಿಂದ ಸಹಾಯ ಪಡೆಯಬೇಕೆನ್ನುವ ಒಕ್ಕೊರಲ ಬೇಡಿಕೆಯ ಪರಿಣಾಮವಾಗಿ, ಹಿಂದೊಮ್ಮೆ ಶಿಸ್ತುಬದ್ಧವಾಗಿ ಕಾರ್ಯತತ್ಪರವಾಗಿದ್ದ ಅರಣ್ಯ ಇಲಾಖೆಯ ಅಧಿಕಾರಿವಲಯ ತನ್ನ ಕಾರ್ಯಕ್ಷಮತೆ ಕಳೆದುಕೊಂಡು ಅರಣ್ಯ ಹಾಗೂ ವನ್ಯ ಜೀವಿ ಸಂಪತ್ತಿಗೆ ಅಪಾರ ಹಾನಿಯಾಗಲು ಎಡೆಮಾಡಿ ಕೊಟ್ಟಿದೆ.

'ಇಕೋ ಡೆವಲಪ್‌ಮೆಂಟ್' ಯೋಜನೆಗಳ ನೆರವಿನಂದ ಕಾರ್ಯನಿರ್ವಹಿಸಬೇಕೆಂಬ ಸಿದ್ಧಾಂತವನ್ನು ಅರಣ್ಯ ಇಲಾಖೆಯವರು ಎಷ್ಟು ಉತ್ಸಾಹದಿಂದ ಬೆಂಬಲಿಸುತ್ತಿದ್ದಾರೆನ್ನುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ಅರಣ್ಯ ಇಲಾಖೆಯು ತನ್ನ 150 ವರ್ಷಗಳ ಇತಿಹಾಸದಲ್ಲಿ ಇಂಥ ಅನೇಕ ಸೈದ್ಧಾಂತಿಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಬಂದಿದೆ. ಈ ಹಿಂದೆ ಜಾರಿಗೆ ತರಲಾದ ಮರಕಡಿತ, ಅರಣ್ಯ ಪ್ರದೇಶವನ್ನು ತೆರವು ಮಾಡುವುದು, 'ಅರಣ್ಯ ಸಂರಕ್ಷಣೆ ಮತ್ತು ಪಾಲನೆ', ಮೊದಲಾದ ಸೈದ್ಧಾಂತಿಕ ಕಾರ್ಯಕ್ರಮಗಳನ್ನು ಇಲ್ಲಿ ಉದಾಹರಿಸಬಹುದು.

20ನೇ ಶತಮಾನದ ಆದಿಯಲ್ಲಿ ಅರಣ್ಯಗಳ ನಿಯಂತ್ರಣವನ್ನು ರಾಜ್ಯಗಳಿಗೆ ವರ್ಗಾಯಿಸಿದ ಮೇಲೆ, ಆದಾಯ ತರುವಂತಹ ಅರಣ್ಯೀಕರಣ ಯೋಜನೆಯನ್ನು ಅನುಸರಿಸಲಾಗುತ್ತಿತ್ತು. ಕಾರ್ಯಯೋಜನೆಗೆ ಅನುಸಾರ ವಾಗಿ ಮರಗಳನ್ನು ಕತ್ತರಿಸಿ ತೆಗೆಯಲಾಗುತ್ತಿತ್ತು. ಗಟ್ಟಿಮರಕ್ಕೆ ಇದ್ದ ಬೇಡಿಕೆಗೆ ತಕ್ಕಂತೆ, ಪ್ರಾಕೃತಿಕ ಕಾಡುಗಳನ್ನು ಕಡಿದು ತೇಗ, ನೀಲಗಿರಿ ಮತ್ತಿತರ ಸಸ್ಯಗಳ ಏಕಜಾತಿಯ ನೆಡುತೋಪುಗಳ ಅಭಿವೃದ್ಧಿ ಪ್ರಾರಂಭವಾಯಿತು. 1970ರ ಆದಿಯಲ್ಲಿ ಆಗಿನ ಪ್ರಧಾನಿ ಇಂದಿರಾಗಾಂಧಿಯವರ ದೂರದೃಷ್ಟಿ, ಅರಣ್ಯಸಂರಕ್ಷಣೆಯ ಫಲವಾಗಿ ಭಾರತದ ಶೇ. 3ರಷ್ಟು ಭೂಪ್ರದೇಶದೊಳಗಿನ ಅರಣ್ಯಗಳನ್ನಾದರೂ ಸಂರಕ್ಷಿತ ವನ್ಯಜೀವಿನೆಲೆಗಳಾಗಿ ಉಳಿಸುವ ಪ್ರಯತ್ನ ಕೈಗೂಡುವಂತಾಯಿತು.

1970ರ ದಶಕದಲ್ಲಿ ಪ್ರಬಲ ರಾಜಕೀಯ ಸಂಕಲ್ಪದ ಬೆಂಬಲದೊಡನೆ, ಪರಿಣಾಮಕಾರಿ ನಿಯಂತ್ರಣವಲಯದೊಳಗೆ ಕೆಲಸ ಮಾಡತೊಡಗಿದ ಶಿಸ್ತುಬದ್ಧ ಅರಣ್ಯಾಧಿಕಾರಿಗಳು ಸಶಕ್ತ ವನ್ಯಜೀವಿ ಕಾಯಿದೆಗಳನ್ನು ಜಾರಿಗೆ ತರತೊಡಗಿದರು. ಮರಕಡಿತದ ಗುರುತು ಮಾಡುವ ಆಯುಧಗಳನ್ನು ಕೈಬಿಟ್ಟು ಅರಣ್ಯ ಸಂರಕ್ಷಣೆಗಾಗಿ ಬಂದೂಕುಗಳನ್ನು ಕೈಗೆತ್ತಿಕೊಂಡ ಅರಣ್ಯಾಧಿಕಾರಿಗಳು ಹಗಲಿರುಳೂ ಅರಣ್ಯ ಸಂರಕ್ಷಣೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದರು. ಹೊಸದಾಗಿ ರೂಪುಗೊಂಡ ವನ್ಯಜೀವಿ ನೆಲೆಗಳಲ್ಲಿ ಕಳ್ಳಬೇಟೆ ತಡೆ, ಅತಿಕ್ರಮಣ ತೆರವು, ಬೆಂಕಿ ನಿಯಂತ್ರಣ ಮೊದಲಾದವು ಅಧಿಕಾರಿಗಳ ಆದ್ಯ ಕರ್ತವ್ಯಗಳಾಗಿದ್ದವು. ಈ ಅಧಿಕಾರಿಗಳ ಹದಿನೈದು ವರ್ಷಗಳ ನಿರಂತರ ಶ್ರಮ ಉತ್ತಮ ಫಲಿತಾಂಶ ದೊರಕಿಸಿಕೊಟ್ಟಿತು.

ಆದರೆ, ವನ್ಯಜಿವಿಗಳನ್ನೂ ಅವುಗಳ ನೆಲೆಗಳನ್ನೂ ವಿವಿಧ ಸ್ವಾರ್ಥಪರ ಶಕ್ತಿಗಳಿಂದ ಕಾಪಾಡುವ ಮತ್ತು ಅಭಿವೃದ್ಧಿಪರ



ಒತ್ತಡಗಳಿಂದ ರಕ್ಷಿಸುವ ಕಾರ್ಯಾಚರಣೆಯ ಫಲವಾಗಿ ಶ್ರದ್ಧಾವಂತ ಅಧಿಕಾರಿಗಳು ಮಾನವ ಕಲ್ಯಾಣ ಕಾರ್ಯಕ್ರಮಗಳನ್ನೂ ಅಭಿವೃದ್ಧಿಪರ ಯೋಜನೆಗಳನ್ನೂ ಕೈಗೊಳ್ಳ ಬಯಸಿದ ರಾಜಕಾರಣಿಗಳ ಆಶಯಕ್ಕೆ ಅಡ್ಡಿ ಬಂದುದಕ್ಕಾಗಿ ಅಧಿಕಾರಿಗಳು ಜನಮುಖಂಡರ ಆಕ್ರೋಶಕ್ಕೂ ಗುರಿಯಾಗಬೇಕಾಯಿತು.

ಕಾಲಕ್ರಮೇಣ ಸ್ವಾರ್ಥಪರ ಹಿತಾಸಕ್ತಿಗಳ ಬಲ ಮೇಲಾಯಿತು. ಅವರ ಮಿತಿಮೀರಿದ ಒತ್ತಡವನ್ನು ಎದುರಿಸಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸಾಧ್ಯವಾಗದೆ ಹೋಯಿತು. ಹಿಂದಿನ ಶ್ರದ್ಧಾವಂತ ಅಧಿಕಾರಿಗಳು ರೂಪಿಸಿದ್ದ ಮಾನದಂಡಗಳ ಮಾರ್ಗದರ್ಶನವನ್ನು ಹೊಸಬರು ಕೈಬಿಟ್ಟರು. ಅರಣ್ಯ ಕಾಯಿದೆಗಳನ್ನು ಜಾರಿಗೊಳಿಸುವ ವೃತ್ತಿಕಾಠಿಣ್ಯವನ್ನು ಕೈಬಿಟ್ಟು ಸುಲಭದ ಹಾದಿಯನ್ನು ಹೊಸ ಅಧಿಕಾರಿಗಳು ಅರಸತೊಡಗಿದರು. 1990ರ ದಶಕದ ಆರಂಭದಲ್ಲೇ ಅವರ ಆಸೆ ಕೈಗೂಡುವ ಸಂದರ್ಭ ಒದಗಿ ಬಂದಿತು. ವರ್ಲ್ಡ್ ಕನ್ಸರ್ವೇಶನ್ ಯೂನಿಯನ್, ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ಮತ್ತು 'ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್' (ಡಬ್ಲ್ಯುಡಬ್ಲ್ಯುಎಫ್) ಸಂಸ್ಥೆಗಳು ಪ್ರಕಟಿಸಿದ 'ಕೇರಿಂಗ್ ಫಾರ್ ದ ಅರ್ತ್'ನಂತಹ ದಾಖಲೆಗಳ ಫಲವಾಗಿ ಸಂರಕ್ಷಣಾ ಸಿದ್ಧಾಂತ ಬೇರೊಂದು ತಿರುವು ಪಡೆದುಕೊಂಡಿತು. ತೃತೀಯ ವಿಶ್ವದ ಜೀವವೈವಿಧ್ಯ ಸಂರಕ್ಷಣೆಯ ಸಮಸ್ಯೆಗಳ ನಿವಾರಣೆಗಾಗಿ ಪಶ್ಚಿಮದೆಡೆಯಿಂದ ಸಾಲದ ರೂಪದಲ್ಲಿ ಹಣದ ಹೊಳೆಯೇ ಹರಿದು ಬರತೊಡಗಿತು.

ವಿಜ್ಞಾನದ ಆಧಾರವಿಲ್ಲದ, ಜೀವಿಪರಿಸ್ಥಿತಿಯ ಅರಿವಿಲ್ಲದ, ಯಾರೋ ತಜ್ಞರೆನಿಸಿಕೊಂಡವರು ರೂಪಿಸಿದ ದೋಷಪೂರ್ಣ ಯೋಜನೆಗಳನ್ನು ಜಾರಿಮಾಡಲು ಈ ಹಣವನ್ನು ವಿನಿಯೋಗಿಸಲಾಯಿತು. ಅರಣ್ಯಸೇವೆಯಲ್ಲಿದ್ದ ಅಧಿಕಾರಿಗಳಿಗೆ ಇಂತಹ ದೊಡ್ಡ ಮೊತ್ತದ ಹಣವನ್ನು ಖರ್ಚುಮಾಡುವ 'ಸುವರ್ಣಾವಕಾಶ' ಪ್ರಾಪ್ತವಾಯಿತು. ಈ ಹಣವನ್ನೆಲ್ಲ ಅಧಿಕಾರಿಗಳು ಸಂರಕ್ಷಣೆಗೆ ಬದಲಾಗಿ ಅದರ ವಿರುದ್ಧ ದಿಕ್ಕಿನಲ್ಲಿ ವ್ಯಯಿಸತೊಡಗಿದರು. ಪರಿಸರ ಅಭಿವೃದ್ಧಿಯ ಹೆಸರಿನಲ್ಲಿ ಗ್ರಾಮೀಣ ಅಭಿವೃದ್ಧಿ, ಬಿದಿರು ಕಡಿತ, ಕಾಡು ತೆರವು ಮಾಡಿ ಗಿಡ ನೆಡುವುದು ಮೊದಲಾದ ಜೀವಿಪರಿಸ್ಥಿತಿಗೆ ಮಾರಕ-ಅರ್ಥಹೀನವೂ ಆದ ಕಾರ್ಯಗಳಲ್ಲಿ ಅರಣ್ಯಾಧಿಕಾರಿಗಳು ತೊಡಗಿಕೊಂಡರು.

ಇದೀಗ ರಾಜ್ಯಸರಕಾರಗಳಿಗೆ ವನ್ಯಜೀವಿಸಂರಕ್ಷಣೆಯ ಬಗೆಗೆ ಆಸಕ್ತಿ ಕಡಿಮೆಯಾಗತೊಡಗಿದೆ. ಮತ್ತೊಂದೆಡೆ ಅರಣ್ಯ ಇಲಾಖೆ ರಚನೆಯ ಸ್ವರೂಪವೇ ತಲೆಕೆಳಗಾದ ಶಿಖರದಂತಾಗಿಬಿಟ್ಟಿದೆ. ಹೇಗೆಂದರೆ ಮೇಲುಸ್ತರದ ಅಧಿಕಾರಿಗಳ ಸಂಖ್ಯೆ ಒಂದೆಡೆ ತುಂಬಿ ತುಳುಕುತ್ತಿದ್ದರೆ ಸಂರಕ್ಷಣಾಕಾರ್ಯದಲ್ಲಿ ತೊಡಗಬೇಕಾದ ನೌಕರರ ಸಂಖ್ಯೆ ಶೇ. 30-40ರಷ್ಟು ಕಡಿಮೆಯಾಗಿದೆ. ಅಧಿಕಾರಿಗಳು ಸಮಗ್ರ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಹುಡುಕುವುದನ್ನೇ ತಮ್ಮ ಕೆಲಸವನ್ನಾಗಿಸಿಕೊಂಡಿದ್ದಾರೆ.

ಮತ್ತೊಂದು ಹಂತದಲ್ಲಿ ಇಕೋ ಡೆವಲಪ್‌ಮೆಂಟ್‌ನಂತಹ ಕಾರ್ಯಕ್ರಮಗಳ ವೈಫಲ್ಯವನ್ನು ಸಾರುವ ಏನೇ ಸಾಕ್ಷಿ, ಪುರಾವೆಗಳಿದ್ದರೂ ಅದನ್ನು ಒಪ್ಪಿಕೊಳ್ಳಲು ವರ್ಲ್ಡ್ ಬ್ಯಾಂಕ್‌ನಂತಹ ನೆರವು ನಿಧಿ ಸಂಸ್ಥೆಗಳಿಗೆ ಮನಸ್ಸಿಲ್ಲ. ಜೀವಿಪರಿಸ್ಥಿತಿಯ ಸತ್ಯಾಂಶದೆಡೆಗೆ ಬೆರಳುತೋರುವ ವೈಜ್ಞಾನಿಕ ವಿಶ್ಲೇಷಣೆಗಳನ್ನು ದೂರವಿರಿಸಿ ಈ ನೆರವು ನಿಧಿ ಸಂಸ್ಥೆಗಳು ಹಟಮಾರಿತನದ ಒಣಪ್ರತಿಷ್ಠೆಯನ್ನೇ ತೋರತೊಡಗಿವೆ. ಇನ್ನೂ ಚಿಂತೆಯ ವಿಷಯವೇನೆಂದರೆ, ಸಾರ್ವಜನಿಕ ಹಣವನ್ನು ವಿನಿಯೋಗಿಸುವ ಅಧಿಕಾರ ಪಡೆದ ಅರಣ್ಯ ಇಲಾಖೆಯ ಅಧಿಕಾರಿಗಳೊಡನೆ 'ತಜ್ಞ'ರೆನಿಸಿಕೊಂಡ ಹಲವು ಅಸಮರ್ಥರೂ, ನಿವೃತ್ತ ಅಧಿಕಾರಿಗಳೂ, ನೀತಿನಿಷ್ಠೆಯಿಲ್ಲದ ಸರಕಾರೇತರ ಸ್ವಯಂಸೇವಾ ಸಂಘಟನೆಗಳೂ ಅದ್ಭುತ ಹೊಂದಾಣಿಕೆಯಲ್ಲಿ ಜತೆಗೂಡಿಕೊಂಡಿದ್ದಾರೆ. ಇವರು 'ಜೀವವೈವಿಧ್ಯ ಸಂರಕ್ಷಣೆಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ', 'ಬಳಸಿ ಇಲ್ಲವೇ ಕಳೆದುಕೊಳ್ಳುವಿರಿ', 'ಮೈಕ್ರೊ ಪ್ಲಾನಿಂಗ್', 'ಪಾಲುಗಾರಿಕೆಯ ಬೆಂಬಲ' ಇದೇ ಮೊದಲಾದ ಘೋಷಣೆಯ ಶೀರ್ಷಿಕೆಗಳಿಂದ ಸಂಭ್ರಮಿಸುವ ವರ್ಣರಂಜಿತ ಯೋಜನೆಗಳ ಪ್ರಸ್ತಾವಗಳನ್ನು ಮುಂದಿಟ್ಟು ನಿಧಿನೆರವು ಸಂಸ್ಥೆಗಳನ್ನು ಒಲಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಈ 'ಇಕೋ ಡೆವಲಪ್‌ಮೆಂಟ್' ಯೋಜನೆಗಳು ಅರಣ್ಯ ಇಲಾಖೆಯ ಸಂರಕ್ಷಣಾ ಶ್ರದ್ಧಾಸಕ್ತಿಗಳ ಮೇಲೂ ಕಾಯಿದೆಗಳನ್ನು ಜಾರಿಗೊಳಿಸುವ ಸಾಮರ್ಥ್ಯದ ಮೇಲೂ ತೀವ್ರ ಹಾನಿಕಾರಕ ಪರಿಣಾಮ ಬೀರಿವೆ. ಈ ಪರಿಣಾಮವೇ ಅರಣ್ಯಭೂಮಿಯ ನಿರಂತರ ಅತಿಕ್ರಮಣ, ದಿನೇದಿನೇ ಕುಗ್ಗುತ್ತಿರುವ ವನ್ಯಜೀವಿಗಳ ನೆಲೆ, ಹೆಚ್ಚುತ್ತಿರುವ ಮಾನವ-ವನ್ಯಜೀವಿ ಸಂಘರ್ಷ ಮೊದಲಾದವುಗಳ ಮೂಲಕ ಬಿಂಬಿತವಾಗುತ್ತಿದೆ. ಅಳಿವಿನಂಚಿನಲ್ಲಿರುವ ವನ್ಯಜೀವಿ ಸಂರಕ್ಷಿತ ನೆಲೆಗಳ ನಿರ್ವಹಣಾ ಯೋಜನೆಗಳ ಮೇಲೂ ಈ 'ಇಕೊ ಡೆವಲಪ್‌ಮೆಂಟ್' ಯೋಜನೆಗಳು ದುಷ್ಪರಿಣಾಮ ಬೀರಿರುವ ಫಲವಾಗಿ, ಈ ನಿರ್ವಹಣಾ ಯೋಜನೆಗಳ ತುಂಬಾ ರಸ್ತೆ, ಅಡಿಕಾಲುವೆಗಳು, ತಡೆಕಟ್ಟೆಗಳೇ ಮೊದಲಾದ ಸಿವಿಲ್ ಕಾಮಗಾರಿಗಳೂ, ಬಿದಿರು ಕೊಯ್ಲು, ಕಳೆನಾಶ ಮತ್ತು ಅರಣ್ಯವನ್ನು ತೆರವುಗೊಳಿಸುವುದೇ ಮೊದಲಾದ ಜೀವಿಪರಿಸ್ಥಿತಿಗೆ ಹಾನಿಕಾರಕ ಅಂಶಗಳೇ ತುಂಬಿಕೊಂಡಿವೆ.

ಇಕೋ ಡೆವಲಪ್‌ಮೆಂಟ್ ಯೋಜನೆಗಳನ್ನು ಕುರಿತು ಸೂಕ್ಷ್ಮ ವಿಶ್ಲೇಷಣೆ ಮಾಡಿರುವ ಡ್ಯೂಕ್ ವಿಶ್ವವಿದ್ಯಾನಿಲಯದ ಸೆಂಟರ್ ಫಾರ್ ಟ್ರಾಪಿಕಲ್ ಕನ್ಸರ್ವೇಷನ್ ಸಂಸ್ಥೆಯ ಡಾ. ಕರೆಲ್ ವಾನ್ ಶೈಕ್ ಮತ್ತು ನೆದರ್ಲೆಂಡ್‌ನ ಇನ್‌ಸ್ಟಿಟ್ಯೂಟ್ ಫಾರ್ ನೇಚರ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಡಾ. ಹರ್ಮನ್ ಡಿ. ರಿಕ್ಸನ್‌ರವರು ಈ ಯೋಜನೆಗಳಲ್ಲಿ ಮೂರು ಪ್ರಮುಖ ದೋಷಗಳನ್ನು ಪಟ್ಟಿಮಾಡಿದ್ದಾರೆ. 1. ಸ್ಥಳೀಯ ಜನರು ತಾಳಿಕೆಯ ಬಳಕೆಯಲ್ಲೂ ಜೀವವೈವಿಧ್ಯ ಸಂರಕ್ಷಣೆಯಲ್ಲೂ ಆಸಕ್ತರಾಗಿದ್ದಾರೆನ್ನುವ ಭ್ರಾಂತಿ. 2. ಪರಾಕಾಷ್ಠೆಯ ಮಟ್ಟಕ್ಕೆ ತಲುಪುತ್ತಿರುವ ಭ್ರಷ್ಟಾಚಾರ ಹಾಗೂ ಸಂಪನ್ಮೂಲಗಳ ಲೂಟಿಯನ್ನು ತಡೆಗಟ್ಟುವ ಪ್ರಾಮಾಣಿಕ ಕ್ರಮ ಇಲ್ಲವೇ ಪ್ರಯತ್ನದ ಕೊರತೆ. 3. ಸಂರಕ್ಷಣಾ ನೆರವು ಯೋಜನೆಗಳನ್ನು ರೂಪಿಸುವಲ್ಲಿ ತಾಂತ್ರಿಕ ಮಾದರಿಗಳ ಅಸಮರ್ಪಕ ಬಳಕೆ, ಈ ಮಹನೀಯರು ಹೇಳುವಂತೆ, ''ಕಾನೂನು ಜಾರಿಯಾಗದೆ ಸಂರಕ್ಷಣೆಯೆನ್ನುವುದು ಅಸಾಧ್ಯ.'' ಅಲ್ಲದೆ, ಪರಿಣಾಮಕಾರಿ ಸಂರಕ್ಷಣೆಗೆ ಎಲ್ಲಿ ಭ್ರಷ್ಟಾಚಾರವು ಅಡ್ಡಿಯುಂಟುಮಾಡುತ್ತದೆಯೊ ಅಂತಹ ಕಡೆಗಳಲ್ಲಿ ಸರಕಾರದ ಪರವಾಗಿ ಸರಕಾರಿ ಯೋಜನೆ ಇಲ್ಲವೇ ಸರ್ವತೋಮುಖ ಯೋಜನೆಗಳೆಂಬ ಸಾಂಪ್ರದಾಯಕ ನಿರ್ವಹಣಾ ಸಿದ್ಧಾಂತಗಳು ಸಿದ್ಧಿಸಲಾರವು. ಈಗ ಆಗಬೇಕಾದುದು ಅರಣ್ಯ ಇಲಾಖೆಯ ಸ್ವವಿಮರ್ಶೆ ಹಾಗೂ ಇಕೊ ಡೆವಲಪ್‌ಮೆಂಟ್ ಯೋಜನೆಗಳ ಪರಿಣಾಮಗಳನ್ನು ಕುರಿತ ನಿಷ್ಪಕ್ಷಪಾತ ವೈಜ್ಞಾನಿಕ ಪರಾಮರ್ಶೆ. ಆದರೆ ಇಂತಹ ಯೋಜನೆಗಳ ಮೇಲೆ ಅಧಿಕಾರಿಗಳು ಬೆಳೆಸಿಕೊಂಡಿರುವ ಅತಿಯಾದ ಮೋಹ/ಅವಲಂಬನೆಯಿಂದಾಗಿ, ಇದು ಸದ್ಯದಲ್ಲಿ ಕೈಗೂಡುವಂತೆ ಕಾಣುತ್ತಿಲ್ಲ.

**ಪ್ರವೀಣ್ ಭಾರ್ಗವ್**

ಕನ್ನಡಕ್ಕೆ- ಟಿ.ಎಸ್. ಗೋಪಾಲ್